ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಆಯವ್ಯಯ:ಬಿ2/ವೇತನ ಪಾವತಿ/01/2015-16 ದಿನಾಂಕ:15/04/2015

### : ಸುತ್ತೋಲೆ :

ವಿಷಯ: 2015-16 ನೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಶಿಕ್ಷಕರುಗಳಿಗೆ ಖಡ್ಡಾಯವಾಗಿ ಪ್ರತಿ ಮಾಹೆಯ 5ನೇ ತಾರೀಖಿನೊಳಗಾಗಿ ವೇತನ ಪಾವತಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ:ಆಯವ್ಯಯ:ಬಿ2 ವೇತನ ಪಾವತಿ:13 2014-15 ದಿನಾಂಕ:21/06/2014

###########

ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಶಿಕ್ಷಕರುಗಳಿಗೆ ಸಕಾಲದಲ್ಲಿ ವೇತನ ಆಗುತ್ತಿಲ್ಲವೆಂಬ ಅಂಶವನ್ನು ಗಮನಿಸಿ ಪ್ರತಿ ತಿಂಗಳ ಕಡೆಯ ದಿನಾಂಕದಂದೆ ವೇತನ ಪಾವತಿಸಲು ಉಲ್ಲೇಖ (1)ರ ಪತ್ರದಲ್ಲಿ ಸೂಚನೆ ನೀಡಲಾಗಿತ್ತು(ನಮೂನೆ-1 ರಂತೆ)

ಈ ಸೂಚನೆಗಳಂತೆ ಪ್ರತಿ ಮಾಹೆಯ ನಿಗದಿತ ದಿನಾಂಕದಂದು ವೇತನ ಪಾವತಿಸಿ 10ನೇ ತಾರೀಖಿನೊಳಗಾಗಿ ಆಯುಕ್ತರ ಕಛೇರಿಗೆ ಕಡ್ಡಾಯವಾಗಿ ಮಾಹಿತಿ ಸಲ್ಲಿಸಲು ತಿಳಿಸಿದಂತೆ, ಬಹಳಷ್ಟು ಜಿಲ್ಲೆಗಳಲ್ಲಿ ನಿಗದಿತ ದಿನಾಂಕದಂದೇ ವೇತನ ಪಾವತಿಸಿರುವುದು ಸಂತೋಷದಾಯಕ ಅಂಶವಾಗಿದೆ.

ಆದರೆ ಏಪ್ರಿಲ್ ಮಾಹೆಯಿಂದ ಪ್ರಾರಂಭಿಸಿ ವೇತನ ಪಾವತಿಸಿದ ಮಾಸಿಕ ವರದಿ ಈ ಕಛೇರಿಗೆ 10 ನೇ ತಾರೀಖಿನೊಳಗೆ ಎಲ್ಲಾ ಜಿಲ್ಲೆಗಳಿಂದ ಬಂದಿರುವುದಿಲ್ಲ. ಅಲ್ಲದೆ. ವಿವಿಧ ಜಿಲ್ಲೆಗಳಲ್ಲಿ ಶಿಕ್ಷಕರ ಸಿಬ್ಬಂದಿ ತಮಗೆ ವೇತನ ಆಗುತ್ತಿಲ್ಲವೆಂದು ಈ ಕಛೇರಿಗೆ ಸಂಘಗಳ ಮೂಲಕ ಮನವಿ ಸಲ್ಲಿಸಿರುತ್ತಾರೆ ನಿಗದಿತ ದಿನಾಂಕದಂದೇ ವೇತನ ಪಾವತಿ ಮಾಡುವಂತೆ 2007-08ನೇ ಸಾಲಿನಲ್ಲಿ ಸರ್ಕಾರ ಸೂಚನೆ ನೀಡಿ ಆದೇಶ ಹೊರಡಿಸಿ ವರ್ಷಗಳು ಕಳೆದರೂ ಇನ್ನೂ ಶಿಕ್ಷಕರ ವೇತನ ಪಾವತಿ ವಿಳಂಬವಾಗುತ್ತಿರುವುದು ವಿಷಾದನೀಯ ಸಂಗತಿಯಾಗಿರುತ್ತದೆ. ಶಿಕ್ಷಕರುಗಳ ವೇತನ ಪಾವತಿ ವಿಳಂಬವಾಗುತ್ತಿರುವ ಬಗ್ಗೆ ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರುಗಳು ಸದನದಲ್ಲಿ ಚರ್ಚಿಸಿರುತ್ತಾರೆ ಹಾಗೂ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಇವರು ಇದರ ಬಗ್ಗೆ ತೀವ್ರವಾಗಿ ಕ್ರಮವಹಿಸಲು ಉಪನಿರ್ದೇಶಕರುಗಳ ಸಭೆಯಲ್ಲಿ ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ತಿಂಗಳ ಕೊನೆಯಲ್ಲಿ ವೇತನ ಪಾವತಿಸುವ ಬಗ್ಗೆ ಕ್ರಮ ವಹಿಸಲು ಶಿಕ್ಷಕರ ವೇತನ ಬಿಲ್ಲುಗಳನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮೂಲಕ ಸಿದ್ಧಪಡಿಸಲಾಗುತ್ತಿದ್ದು, ಪ್ರತಿ ತಿಂಗಳು ವೇತನ ಬಡವಾಡೆ ಅಧಿಕಾರಿಗಳು ವಿಳಂಬ ಮಾಡುತ್ತಿರುವುದು ತಂತ್ರಾಂಶದ ಮಾಹಿತಿಯಿಂದ ತಿಳಿದು ಬರುತ್ತದೆ. ವೇತನ ಬಿಲ್ಲುಗಳನ್ನು ಸಲ್ಲಿಸಲು ವಿಳಂಬವಾದಾಗ ಸ್ವಾಬಾವಿಕವಾಗಿ ವೇತನ ಬಟವಾಡೆ ವಿಳಂಬವಾಗುತ್ತಿದೆ. ಇದಕ್ಕೆ ಬಟವಾಡೆ ಅಧಿಕಾರಿಗಳೇ ಮೂಲ ಕಾರಣರಾಗಿರುತ್ತಾರೆ. ಇನ್ನು ಮುಂದೆ ಹೆಚ್.ಆರ್.ಎಂ.ಎಸ್ ತಂತ್ರಾಂಶದಿಂದ ಬಿಲ್‌ಗಳನ್ನು ಪ್ರತಿ ತಿಂಗಳ 20ನೇ ತಾರೀಖಿನೊಳಗಾಗಿ ತಯಾರಿಸಿ, ಸಿದ್ಧಪಡಿಸಲು ಸೂಚಿಸಿದೆ. ಈ ಬಗ್ಗೆ ಮಾನ್ಯ ಆಯುಕ್ತರಿಂದ ಕಾಲಕಾಲಕ್ಕೆ ಸುತ್ತೋಲೆ ಹೊರಡಿಸಲಾಗಿದೆ. ಆದಾಗ್ಯೂ ಶಿಕ್ಷಕರ ವೇತನ ಪಾವತಿಸುವಲ್ಲಿ ವಿಳಂಬಮಾಡುತ್ತಿರುವುದು ಗಂಭೀರವಾದ ವಿಚಾರವಾಗಿದೆ.

(2) ವೇತನ ಬಿಲ್ಲುಗಳನ್ನು ಹೆಚ್.ಆರ್.ಎಂ.ಎಸ್. ನಲ್ಲಿ ಸಿದ್ಧಪಡಿಸಿ, ಟೋಕನ್ ನಮೂದಿಸಿಕೊಂಡು ಖಜಾನೆಗೆ ಪ್ರತಿ ತಿಂಗಳು ನಿಗಧಿತ ದಿನಾಂಕದಂದು ಸಲ್ಲಿಸಲು ಸೂಚಿಸಿದೆ. ಯಾವುದೇ ಕಾರಣಕ್ಕೂ ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸಲು ವಿಳಂಬವಾಗಬಾರದು.

(3) ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮೂಲಕ ಬಿಲ್ಲುಗಳನ್ನು ಜನರೇಟ್ ಮಾಡಿ ಪಡೆದ ಮಾಹಿತಿ ರಾಜ್ಯ ಮಟ್ಟದಲ್ಲಿ ಲಭ್ಯವಾಗುತ್ತಿರುವುದರಿಂದ ವಿಳಂಬ ಮಾಡಿದ ಸಂದರ್ಭದಲ್ಲಿ ಸಂಬಂದಿಸಿದ ಬಟವಾಡೆ ಅಧಿಕಾರಿಗಳನ್ನು ಗುರುತಿಸಿ ಹೊಣೆಗಾರರನ್ನಾಗಿ ಮಾಡಲಾಗುವುದು.

(4) ವೇತನವನ್ನು ನಿಗದಿತ ದಿನಾಂಕದಂದು ಪಾವತಿಸಲು ಉಪನಿರ್ದೇಶಕರು/ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿ ಒಬ್ಬ ನೋಡೆಲ್ ಅಧಿಕಾರಿಗಳನ್ನು ನೇಮಿಸಿ ಈ ನೋಡೆಲ್ ಅಧಿಕಾರಿಯು ಹೆಚ್.ಆರ್.ಎಂ.ಎಸ್. ನಿಂದ ಬಿಲ್ ಪಡೆಯಲು ಬಿಲ್ಲುಗಳ ಮೇಲೆ ಪ್ರಸಕ್ತ ಸಾಲಿಗೆ ಲೆಕ್ಕ ಶೀರ್ಷಿಕೆಯು ಬದಲಾವಣೆ ಹೊಂದಿರುವುದನ್ನು ಗಮನಿಸಿ, ಅನುದಾನ ನಮೂದಿಸಲು

ಹಾಗೂ ನಿಗದಿತ ದಿನಾಂಕದಂದು ಖಜಾನೆಗೆ ಬಿಲ್ ಸಲ್ಲಿಸಲು ಮತ್ತು ಖಜಾನೆಯಿಂದ ವೇತನವನ್ನು ಸಂಬಂದಿಸಿದ ಬ್ಯಾಂಕ್‌ಗಳಲ್ಲಿ ಶಿಕ್ಷಕರ ಖಾತೆಗಳಲ್ಲಿ ಜಮಾ ಆಗುವವರೆಗೆ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಲು ಸೂಚನೆ ನೀಡಲು ಉಪನಿದೇಶಕರುಗಳಿಗೆ ತಿಳಿಸಲಾಗಿದೆ.

ಆದ್ದರಿಂದ ಶಿಕ್ಷಕರ ವೇತನವನ್ನು ವಿಳಂಬ ಮಾಡದೆ ತಿಂಗಳ ಕಡೆಯ ದಿನಾಂಕದಂದು ತಪ್ಪದೆ ಪಾವತಿಸಲು ಕ್ರಮವಹಿಸುವುದು ಹಾಗೂ ನಮೂನೆ-1 ರಲ್ಲಿ ಕೇಳಿರುವ ಮಾಹಿತಿಯನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಈ ಕಛೇರಿಗೆ ಕಳುಹಿಸುವಂತೆ ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ,

1. ಮುಖ್ಯ ಕಾರ್ಯನಿರ್ವಹನಾಧಿಕಾರಿಗಳು, ಜಿಲ್ಲಾ ಪಂಚಾಯತ್, ----------------ಇವರಿಗೆ ಸೂಕ್ತ ಅವಗಾಹನೆಗಾಗಿ ಹಾಗೂ ತಮ್ಮ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ ಇವರಿಗೆ ಅವಗಾಹನೆಗಾಗಿ ಹಾಗೂ ತಮ್ಮ ಆಯುಕ್ತಾಲಯ ವ್ಯಾಪ್ತಿಯ ಶಿಕ್ಷಕರ ಸಿಬ್ಬಂದಿಗೆ ವೇತನ ಪಾವತಿಸಿದ ಮಹಿತಿಯನ್ನು ಪ್ರತಿ ತಿಂಗಳು 10ನೇ ತಾರೀಖಿನೊಳಗೆ ಕ್ರೋಢೀಕರಿಸಿ ಪರಿಶೀಲಿಸಿಕೊಂಡು ಈ ಕಛೇರಿಗೆ ಒಂದು ಪ್ರತಿ ಕಳುಹಿಸಲು ಸೂಚಿಸಿದೆ.
3. ನಿರ್ದೇಶಕರು(ಪ್ರಾಥಮಿಕ/ಪ್ರೌಢ ಶಿಕ್ಷಣ/ಉರ್ದು ಮತ್ತು ಇತರೆ ಭಾಷಾ ಶಾಲೆಗಳು), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ರಾಜ್ಯದ ಎಲ್ಲಾ ಉಪನಿದೇಶಕರು(ಆಡಳಿತ) ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢ ಶಾಲಾ ಶಿಕ್ಷಕರ ಸಂಘ(ರಿ),ಬೆಂಗಳೂರು ಇವರಿಗೆ ಮಾಹಿತಿಗಾಗಿ,
7. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಬೆಂಗಳೂರು, ಇವರಿಗೆ ಮಾಹಿತಿಗಾಗಿ
8. ಕಛೇರಿ ಪ್ರತಿ.